

# ನಾರಿ ಮೆಕ್ಯಾನಿಕ್!

ಹೆಂಗಸರು ಈ ಕೆಲಸಕ್ಕೆ ಅರ್ಹರಲ್ಲ, ಇದು ಹೆಣ್ಣು ಮಕ್ಕಳ ಕೆಲಸ ಅಲ್ಲವೇ ಅಲ್ಲ, ಒಬ್ಬ ಹೆಂಗಸು 50 ಕೆ.ಜಿಯಷ್ಟು ಭಾರದ ಟ್ರಕ್ ಟಯರ್ ಅನ್ನು ಎತ್ತಬಲ್ಲಳೇ? ಜಾಕ್ ಹೇಗೆ ಕೆಲಸ ಮಾಡುತ್ತದೆಯೆಂಬುದು ಹೆಂಗಸರಿಗೆ ತಿಳಿದಿರುತ್ತದೆಯೇ? ಎನ್ನುವ ಪ್ರಶ್ನೆಗಳಿಗೆ ತಕ್ಕ ಉತ್ತರ ನೀಡುತ್ತಿದ್ದಾಳೆ ದೆಹಲಿಯಲ್ಲಿರುವ ಶಾಂತಿ ದೇವಿ.

ಹೆಣ್ಣೊಬ್ಬಳು, ಗಂಡಸು ಮಾಡುವ ಕೆಲಸವನ್ನು ಅವರಷ್ಟೇ ಸರಿಸಮಾನವಾಗಿ ನಿಭಾಯಿಸಬಲ್ಲಳು ಎಂಬುದಕ್ಕೆ ಸಾಕ್ಷಿಯಾಗಿದ್ದಾಳೆ 56 ವರ್ಷದ ಈ ಮಹಿಳೆ. ಈಕೆಯನ್ನು ಬಹುಶಃ ಇಡೀ ನಾಡಿನಲ್ಲಿನ ಏಕೈಕ ಲೇಡಿ ಟ್ರಕ್ ಮೆಕ್ಯಾನಿಕ್ ಎನ್ನಬಹುದು!

ಮಧ್ಯ ಪ್ರದೇಶದ ಬಡ ಕುಟುಂಬದಿಂದ ದೆಹಲಿಗೆ ವಲಸೆ ಬಂದ ಶಾಂತಿದೇವಿಯು ಮೊದಲು ಚಹಾ ಅಂಗಡಿಯನ್ನು ನಡೆಸುತ್ತಿದ್ದಳಂತೆ. ಇದರಿಂದ ಬರುವ ಆದಾಯದಲ್ಲಿ ಕುಟುಂಬ ನಿರ್ವಹಣೆ ದುಸ್ತರವಾದಾಗ ಲಾರಿ ಮೆಕ್ಯಾನಿಕ್‌ನಂತಹ ಕಠಿಣ ಕೆಲಸವನ್ನು ಗಂಡನಿಂದ ಕಲಿತುಕೊಂಡಳಂತೆ. ದೆಹಲಿಯ ಹೊರವಲಯದಲ್ಲಿರುವ ಸಂಜಯ್ ಗಾಂಧಿ ಟ್ರಾನ್ಸ್ ಪೋರ್ಟ್ ನಗರದಲ್ಲಿ ಅತ್ಯಂತ ಸಲೀಸಾಗಿ ಕಳೆದ 20 ವರ್ಷಗಳಿಂದ ಈ ಕೆಲಸವನ್ನು ನಿರ್ವಹಿಸುತ್ತಿದ್ದಾಳೆ.

ಮೊದ ಮೊದಲು ಗಂಡಸರಿಗೆ ಮಾತ್ರವಷ್ಟೇ ಸೀಮಿತವೆನಿಸಿದ ಮೆಕ್ಯಾನಿಕ್ ಕೆಲಸವನ್ನು ಮಾಡುವಾಗ ಹಲವು ಜನ ಅಚ್ಚರಿಯಿಂದ ಈಕೆಯನ್ನು ನೋಡುತ್ತಿದ್ದರಂತೆ. ಕೆಲವರು ರಿಪೇರಿಗಾಗಿ ತಮ್ಮ ಲಾರಿಯನ್ನು ಕೊಡಲು ಅನುಮಾನ ಪಡುತ್ತಿದ್ದರಂತೆ. ನಂತರ ಈಕೆಯ ಕೆಲಸದ ನೈಪುಣ್ಯವನ್ನು  ಅರಿತು ಖಾಯಂ ಗಿರಾಕಿಗಳಾಗಿದ್ದಾರಂತೆ.

ಎಲ್ಲರೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ಶಾಂತಿದೇವಿಯು 50 ಕಿಲೋಗ್ರಾಂ ನಷ್ಟು ಭಾರದ ಟ್ರಕ್ ಟೈರನ್ನು ಸಲೀಸಾಗಿ ಎತ್ತಬಲ್ಲಳು. ಹಾಗೆಯೇ ಪ್ರತೀ ದಿನವೂ 10ರಿಂದ 15 ಪಂಕ್ಚರನ್ನು ತಿದ್ದಿ ಸರಿಪಡಿಸುತ್ತಾಳಂತೆ. ದಿನಕ್ಕೆ 12 ತಾಸು ದುಡಿಯುವ ಶಾಂತಿ ದೇವಿಯು 'ನಾನು ನನ್ನ ಕೆಲಸವನ್ನು ಬಹಳ ಇಷ್ಟ ಪಡುತ್ತೇನೆ. ಇದು ತುಸು ಕಷ್ಟ. ಆದರೆ ಕೆಲಸವಿಲ್ಲದೆ ಖಾಲಿ ಕುಳಿತಿರುವುದು ನನ್ನಿಂದಾಗದು. ಈ ಕೆಲಸ ನನಗೆ ಬಹಳಷ್ಟು ಕಲಿಸಿಕೊಟ್ಟಿದೆ. ಜನರು ನನ್ನನ್ನು ಮೊದಲ ಹಾಗೂ ಏಕ ಮಾತ್ರ ಮಹಿಳಾ ಟ್ರಕ್ ಮೆಕ್ಯಾನಿಕ್ ಎಂದು ಕರೆಯುವುದು ನನಗೆ ಹೆಮ್ಮೆ ಎನ್ನಿಸುತ್ತದೆ' ಎಂದು ಪತ್ರಿಕಾ ಸಂದರ್ಶನವೊಂದರಲ್ಲಿ ನುಡಿದಿದ್ದಾಳೆ. ಹಲವು ಮಹಿಳೆಯರಿಗೆ ಮಾದರಿಯಾಗಿರುವ ಶಾಂತಿದೇವಿಯು ನಿಜಕ್ಕೂ ಗ್ರೇಟ್ ಅಲ್ಲವೇ?



■ ವಿದ್ಯಾ ವಿ. ಹಾಲಭಾವಿ